

ರಿಚರ್ಡ್ ಹೀರಮ್ ಸ್ಯಾಂಕಿ



ಮೂಲ ಹಲ್ಮಿಡಿ ಶಾಸನದ ಶಿಲೆಯನ್ನು ನೋಡಬೇಕೆಂದು ಬೆಂಗಳೂರಿನ ಪುರಾತತ್ವ ವಸ್ತುಸಂಗ್ರಹಾಲಯದ ಕಡೆಗೆ ಅಂದು ಹೊರಟೆ. ನಮ್ಮ ವಾಹನ ರಕ್ತಗೆಂಪು ಬಣ್ಣದ ಹೈಕೋರ್ಟ್ ಕಟ್ಟಡವನ್ನು ದಾಟಿತು. ಅದರ ಅಂದಚಂದ ಭವ್ಯತೆಗೆ ಮರುಳಾಗಿರುವಾಗಲೇ ಅಂತಹುದೇ ದಟ್ಟ ಕೆಂಪು ಬಣ್ಣದ ಇನ್ನೊಂದು ಕಟ್ಟಡ ಕಬ್ಬನ್ ಪಾರ್ಕಿನ ಮತ್ತೊಂದು ತುದಿಯಲ್ಲಿ ಕಾಣಿಸಿತು. ಅದು ಸರ್ಕಾರದ ಕೇಂದ್ರ ಗ್ರಂಥಾಲಯ ಕಟ್ಟಡ. ಚಂದಚಂದ ಎಂದುಕೊಂಡು ಹೋದರೆ ಮುಂದೆ ಮತ್ತೊಂದು ಪರಿಚಿತ ವಿನ್ಯಾಸದ ಕೆಂಪು ಕಟ್ಟಡ ಎದುರು ಹಾಯಿತು. ಅದುವೇ ಪುರಾತತ್ವ ಇಲಾಖೆಯ ವಸ್ತುಸಂಗ್ರಹಾಲಯ! ನನ್ನ ಊಹೆ ನಿಜ, ವಿನ್ಯಾಸದಿಂದ ಕಟ್ಟೋಣದವರೆಗೆ ಈ ಮೂರೂ ಕಟ್ಟಡಗಳನ್ನು ರೂಪಿಸಿದ್ದು ಒಬ್ಬರೇ ಎಂಜಿನಿಯರು.

ಆತ ರಿಚರ್ಡ್ ಹೀರಮ್ ಸ್ಯಾಂಕಿ.

ಸ್ಯಾಂಕಿ! ಎಲ್ಲೋ ಕೇಳಿದ ಹೆಸರು ಅನಿಸುವುದೇ? ಹ್ಞಾಂ, ಅದೇ, ಆ ಕೆರೆ. ಸ್ಯಾಂಕಿ ಕೆರೆ. ಒಂದು ಕಾಲದ (ಇಂದಿಗೂ) ಬೆಂಗಳೂರಿನ ಹೆಮ್ಮೆಯ ಸಂಕೇತಗಳಲ್ಲಿ ಹಲವನ್ನು ಕಟ್ಟಿದ್ದು ಎಂಜಿನಿಯರ್ ಸ್ಯಾಂಕಿ. ಭಾರತದ ಇತರೆಡೆಗಳಲ್ಲೂ ಅವರು ಕಟ್ಟಿದ ಕಟ್ಟಡ, ಚರ್ಚ್, ಉದ್ಯಾನವನ, ವಸ್ತುಸಂಗ್ರಹಾಲಯಗಳಿದ್ದರೂ ಮೈಸೂರು ರಾಜ್ಯದ ಚೀಫ್ ಎಂಜಿನಿಯರರಾಗಿ 13 ವರ್ಷ ಗಮನಾರ್ಹ ಕೆಲಸ ಮಾಡಿದ್ದಾರೆ. ಸ್ಯಾಂಕಿ ಕೆರೆ, ಪುರಾತತ್ವ ವಸ್ತುಸಂಗ್ರಹಾಲಯ, ಅಠಾರಾ ಕಚೇರಿ, ಕೇಂದ್ರ ಗ್ರಂಥಾಲಯಗಳಷ್ಟೇ ಅಲ್ಲದೆ, ಕಬ್ಬನ್ ಪಾರ್ಕ್ ರೂಪಿಸಿದವರೂ ಅವರೇ. ಬೆಂಗಳೂರು ನಗರಪಾಲಿಕೆ ಕಚೇರಿಯಿರುವ ಮೇಯೋ ಹಾಲ್ ವಿನ್ಯಾಸವೂ ಅವರದೇ! ಬೆಳೆಯುತ್ತಿದ್ದ ನಗರಕ್ಕೆ ಕೆರೆ, ಕಚೇರಿ, ಉದ್ಯಾನವನ, ಪ್ರಾರ್ಥನಾ ಸ್ಥಳ, ವಸ್ತುಸಂಗ್ರಹಾಲಯ ಎಲ್ಲವೂ ಅವಶ್ಯವೆಂದು ಯೋಜಿಸಿ ವಿನ್ಯಾಸಗೊಳಿಸಿದ ಸ್ಯಾಂಕಿಯ ಬಗೆಗೆ ತಿಳಿದುಕೊಳ್ಳುತ್ತ ಹೋದಂತೆ ವಸಾಹತುಶಾಹಿಗಳ ಕೇಡಿನ ಜೊತೆಯಲ್ಲಿ ಅನಾಯಾಸವಾಗಿ ಭಾರತಕ್ಕೆ ಬಂದ ಕೆಲವು ಒಳಿತುಗಳ ಅನಾವರಣವಾಯಿತು.

## ರಿಚರ್ಡ್ ಹೀರಮ್ ಸ್ಯಾಂಕಿ

ಐರ್ಲೆಂಡಿನ ರಿಚರ್ಡ್ ಹೀರಮ್ ಸ್ಯಾಂಕಿ (1829–1908) ಹದಿನಾರು ವರ್ಷದವರಿರುವಾಗ ಈಸ್ಟ್ ಇಂಡಿಯಾ ಕಂಪನಿಯ ಮಿಲಿಟರಿ ಕಾಲೇಜು ಸೇರಿದರು. ಮೂರು ವರ್ಷ ತರಬೇತಿ ಪಡೆದ ಬಳಿಕ ಸೀದಾ ಭಾರತಕ್ಕೆ, ಮಡಿಕೇರಿಗೆ ಬಂದಿಳಿದರು. 'ಮದ್ರಾಸ್ ಎಂಜಿನಿಯರ್ಸ್' ತಂಡದಲ್ಲಿ ಎರಡು ವರ್ಷ ಕೆಲಸ ಮಾಡಿದ ಬಳಿಕ ನಾಗಪುರಕ್ಕೆ ವರ್ಗಾವಣೆಯಾದರು. 22 ವರ್ಷದ ಯುವಕ ನಾಗಪುರದಲ್ಲಿ ಆಲ್ ಸೇಂಟ್ಸ್ ಕೆಥೆಡ್ರಲ್ ಎಂಬ ಅನನ್ಯ ಶೈಲಿಯ ಕೆಂಪು ಬಿಳಿ ಕಟ್ಟಡ ರೂಪಿಸಿದರು. ಅದು ಅವರ ಮೊದಲ ಗ್ರೀಕೋ ರೋಮನ್ ಶೈಲಿಯ ಕಟ್ಟಡ ಕಟ್ಟೋಣದ ಪ್ರಯತ್ನ. ನಂತರ ಆ ಶೈಲಿಯಲ್ಲಿ ಹಲವು ವಿನ್ಯಾಸಗಳನ್ನು ರೂಪಿಸಿದರು.

ಮರಗಳನ್ನು ಅತೀವವಾಗಿ ಪ್ರೀತಿಸುತ್ತಿದ್ದ ಸ್ಯಾಂಕಿ ತನ್ನಷ್ಟೇ ಪ್ರಕೃತಿಪ್ರೇಮಿಯಾಗಿದ್ದ ಸೋಫಿಯಾ ಮೇರಿ ಎಂಬುವಳನ್ನು ಮದುವೆಯಾದರು (1859). ಅವರು ಉತ್ತಮ ಚಿತ್ರಕಾರನೂ ಹೌದು. ಊರು, ಕೆರೆ, ನದಿ, ಬೀದಿ, ಜನ, ಮನೆ, ಸಸ್ಯವೈವಿಧ್ಯಗಳ ಹಲವಾರು ತೈಲವರ್ಣ ಚಿತ್ರಗಳನ್ನು ರಚಿಸಿದರು. ಆ ಚಿತ್ರಗಳನ್ನು ನೋಡಿದರೆ ಸಾಕು, ಅಂದಿನ ಭಾರತದ ಸ್ಥಿತಿಗತಿ ತಿಳಿದುಬರುತ್ತದೆ. ಎಂಜಿನಿಯರ್ ಸ್ಯಾಂಕಿಗೆ ಕಂಡದ್ದರ ಮೇಲೆಲ್ಲ ಆಸಕ್ತಿ. ಅವರಿಗೆ ಭಾರತವು ಐತಿಹಾಸಿಕ, ಪುರಾತತ್ವ ಸಾಕ್ಷ್ಯಗಳ ಮ್ಯೂಸಿಯಂನಂತೆಯೇ ಕಾಣಿಸಿತು. ನಾಗಪುರದ ಭೂ ಲಕ್ಷಣಗಳನ್ನು ಅಭ್ಯಾಸ ಮಾಡಿದರು. ಕಾನ್ಹಾ ಕಣಿವೆಯಲ್ಲಿ ಕಲ್ಲಿದ್ದಲ ಗಣಿ ಇದೆಯೆಂದು ಪತ್ತೆ ಮಾಡಿದರು. 25 ಕೋಟಿ ವರ್ಷಗಳ ಹಿಂದಿನ ಸಸ್ಯ ಪಳೆಯುಳಿಕೆಗಳನ್ನು ಕಂಡು ರೋಮಾಂಚಿತರಾದರು. ಕಂಡದ್ದು, ಸಿಕ್ಕಿದ್ದನ್ನೆಲ್ಲ ಸಂಗ್ರಹಿಸತೊಡಗಿದರು.

ನಾಗಪುರದ ಬಳಿಕ ಕಲಕತ್ತಾ, ಕಾನ್ಪುರ, ಲಕ್ನೋ, ಅಲಹಾಬಾದ್‌ಗಳಲ್ಲಿ ಅಧಿಕಾರಿಯಾಗಿದ್ದ ಸ್ಯಾಂಕಿ, 'ಸಿಪಾಯಿ ದಂಗೆ'ಯ ಕಾಲದಲ್ಲಿ ಬ್ರಿಟಿಷ್ ಸೇನೆಯ ಚಲನೆಗೆ ಅನುಕೂಲವಾಗುವಂತೆ ಹಲವೆಡೆ ಸೇತುವೆ, ಕಟ್ಟು, ಕಟ್ಟಡಗಳನ್ನು ಅತಿಕಡಿಮೆ ಸಮಯದಲ್ಲಿ ನಿರ್ಮಿಸಿ ಮೆಚ್ಚುಗೆ ಗಳಿಸಿದರು. ಬರ್ಮಾ, ನೀಲಗಿರಿ ಪ್ರದೇಶಗಳಲ್ಲಿ ಕೆಲಸ ಮಾಡಿದ ನಂತರ 1961ರಲ್ಲಿ ಮತ್ತೆ ಮೈಸೂರು ರಾಜ್ಯಕ್ಕೆ ಬಂದರು. 13 ವರ್ಷಗಳ ಸೇವಾವಧಿಯಲ್ಲಿ ಚೀಫ್ ಎಂಜಿನಿಯರರ ಸಹಾಯಕರಾಗಿ, ತಾನೇ ಚೀಫ್ ಎಂಜಿನಿಯರರಾಗಿ, ಬಳಿಕ ಮುಖ್ಯ ಆಯುಕ್ತರ ಕಾರ್ಯದರ್ಶಿಯಾಗಿ ಕೆಲಸ ಮಾಡಿದರು.

## ಬೆರಗಾಗುವಂತೆ ಬೆಳೆದ ಬೆಂಗಳೂರು

ನಾಲ್ಕನೇ ಮೈಸೂರು ಯುದ್ಧದಲ್ಲಿ ಗೆದ್ದ ಬಳಿಕ 1809ರ ವೇಳೆಗೆ ಬ್ರಿಟಿಷರಿಗೆ ಶ್ರೀರಂಗಪಟ್ಟಣಕ್ಕಿಂತ ಉತ್ತಮ ಹವೆಯ ಬೆಂಗಳೂರೇ ವಾಸಯೋಗ್ಯವೆನಿಸಿತು. ಅವರ ಸೇನಾದಳ ಬೆಂಗಳೂರಿಗೆ ವರ್ಗಾವಣೆಯಾಯಿತು. ಅವರೊಡನೆ ದಂಡುಪ್ರದೇಶಕ್ಕೆ ಅಗತ್ಯವಿದ್ದ ಸೇವಾವಲಯದ ಹಿಂಡೂ ಬಂತು. ಒಂದೇ ಸಮ ಬೆಳೆಯುತ್ತಿದ್ದ ಬೆಂಗಳೂರಿನ ಮೇಲೆ ವಿಶ್ವದೆಲ್ಲೆಡೆಯ ಜನರ ಕಣ್ಣು ಬಿತ್ತು. ಮೈಸೂರಿನ ಆಳ್ವಿಕರೂ ಆಧುನಿಕ ಬೆಂಗಳೂರು ಕಟ್ಟುವ ಉತ್ಸಾಹ ಹೊಂದಿದ್ದರು. ಈ ಅವಕಾಶವನ್ನು ಸ್ಯಾಂಕಿ ಸಮರ್ಥವಾಗಿ ಬಳಸಿಕೊಂಡರು. ನಗರವನ್ನು ಚಂದವಾಗಿಸಿ, ಶಿಸ್ತುಗೊಳಿಸುವ ನಿರ್ಮಾಣ ಕಾರ್ಯಗಳನ್ನು ಕೈಗೆತ್ತಿಕೊಂಡರು.

ಅವರ ಮೊದಲ ಕೆಲಸ ಮೈಸೂರು ರಾಜ್ಯದ ಕೆರೆಗಳನ್ನು, ಅವುಗಳ ಜಲಾನಯನ ಪ್ರದೇಶವನ್ನು ವಿಸ್ತೃತವಾಗಿ ಅಧ್ಯಯನ ಮಾಡಿದ್ದು. ರಾಜ್ಯದ ಶೇ. 60ರಷ್ಟು ಕೃಷಿಭೂಮಿಯು ನೀರಾವರಿಗಾಗಿ ಕೆರೆಯನ್ನೇ ನಂಬಿತ್ತು. ಒಬ್ಬ ಅಭಿಯಂತರರಾಗಿ ಅವರಿಗೆ ಕೆರೆಗಳಲ್ಲಿ ನೀರು ಸಂಗ್ರಹಿಸುವ ಪದ್ಧತಿ ಬಹಳ ಸೆಳೆಯಿತು. ಹಳೆಯ ಕೆರೆಗಳ ಏರಿ, ತೋಡು, ಕಾಲುವೆಗಳನ್ನು ದುರಸ್ತಿ ಮಾಡಿಸಿದರು. (ಮದ್ದೂರಿನ ಬಳಿಯ ಸೂಳೆಕೆರೆಯೂ